# ಪತ್ರಿಕಾ ಪ್ರಕಟಣೆ

ರಾಜ್ಯ ವಾಣಿಜ್ಯ ತೆರಿಗೆ ಇಲಾಖೆಯ ಜಾಗೃತಿ ವಿಭಾಗ ಇವರು ನಡೆಸಿದ ಕಾರ್ಯಾಚರಣೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆಯ ಕೆಲವು ಹೋಟೆಲ್ ವರ್ತಕರು ವಹಿವಾಟನ್ನು ಘೋಷಿಸಿಕೊಳ್ಳದೆ ವಂಚಿಸಿರುವ ಪ್ರಕರಣವನ್ನು ಬಯಲಿಗೆಳೆದಿದ್ದಾರೆ.

ಸದರಿ ವ್ಯಾಪಾರ ಕೇಂದ್ರಗಳ ಪೂರ್ವಭಾವಿ ಪರಿಶೀಲನೆ ನಡೆಸಿದ ತರುವಾಯ 50 ಅಧಿಕಾರಿಗಳ ತಂಡವು ಬಿರಿಯಾನಿ ಮತ್ತು ಇತರೆ ಮಾಂಸಾಹಾರಿ ಪದಾರ್ಥಗಳ ಹಾಗೂ ಈ ಹೋಟೆಲುಗಳ ಮಾಲೀಕರ ಮನೆಗಳಲ್ಲಿಯೂ ಶೋಧನೆ ನಡೆಸಿರುತ್ತಾರೆ. ಈ ವರ್ತಕರು ಹಲವಾರು ಯುಪಿಐ ಪಾವತಿ ಖಾತೆಗಳನ್ನು ಬಳಸಿಕೊಂಡು ಹಣವನ್ನು ಸ್ವೀಕರಿಸುವುದರ ಜೊತೆಗೆ ನಿರಂತರವಾಗಿ ಯುಪಿಐ ಪಾವತಿ ಖಾತೆಗಳನ್ನು ಬದಲಾಯಿಸುವ ಮುಖಾಂತರ ನೈಜ ವಹಿವಾಟನ್ನು ಮುಚ್ಚಿಟ್ಟು ತೆರಿಗೆಯನ್ನು ವಂಚಿಸಿರುವುದು ಕಂಡುಬಂದಿರುತ್ತದೆ.

ಈ ಹೋಟೆಲ್ ವರ್ತಕರು ತಮ್ಮ ವಹಿವಾಟಿಗೆ ಸಂಬಂಧಿಸಿದಂತೆ ಯಾವುದೇ ತೆರಿಗೆ ಬಿಲ್ಲು/ ಪೂರೈಕೆ ಬಿಲ್ಲನ್ನು ನೀಡದೆ, ಲೆಕ್ಕ ಪುಸ್ತಕಗಳನ್ನು ಸಮರ್ಪಕವಾಗಿ ನಿರ್ವಹಿಸದೇ ಇರುವುದು ಕಂಡುಬಂದಿರುತ್ತದೆ. ಒಂದು ಪ್ರಕರಣದಲ್ಲಿ ವರ್ತಕರೊಬ್ಬರು ಮೂವತ್ತು ಕ್ಯೂಆರ್ ಕೋಡ್ ಖಾತೆಗಳನ್ನು ಹೊಂದಿರುವುದನ್ನು ಪತ್ತೆಹಚ್ಚಲಾಗಿದೆ.

ಶೋಧನಾ ಸಂದರ್ಭದಲ್ಲಿ ಹೋಟೆಲ್ ಮಾಲೀಕರೊಬ್ಬರ ಮನೆಯಲ್ಲಿ ರೂ 1.47 ಕೋಟಿ ನಗದು ಮೊತ್ತವು ಪತ್ತೆಯಾಗಿದ್ದು ಸದರಿ ಮಾಹಿತಿಯನ್ನು ಕೂಡಲೇ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತರಲಾಗಿದ್ದು,ಸದರಿಯವರು ಹಣವನ್ನು ವಶಕ್ಕೆ ಪಡೆದುಕೊಂಡು ತನಿಖೆಯನ್ನು ಆರಂಭಿಸಿರುತ್ತಾರೆ.

ವಾಣಿಜ್ಯ ತೆರಿಗೆ ಇಲಾಖೆಯು ತೆರಿಗೆ ವಂಚನೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ತೆರಿಗೆ ವಂಚನೆಯ ವಿಧಿ ವಿಧಾನಗಳನ್ನು ವಿಶ್ಲೇಷಿಸಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದನ್ನು ಮುಂದುವರೆಸುತ್ತದೆ.

(ಸಿ.ಶಿಖಾ)
ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ)

ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ) ಬೆಂಗಳೂರು